1037 (1402) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಗ್ರಾಮ–ಸುಗ್ರಾಮ ಯೋಜನೆಯಡಿ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳನ್ನು ಗುರುತಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

ಆ) ಇದಕ್ಕಾಗಿ ಎಷ್ಟು ಹಣವನ್ನು ಪ್ರತಿ ಗ್ರಾಮ ಪಂಚಾಯ್ತಿವಾರು ನಿಗದಿಪಡಿಸಲಾಗಿದೆ ; ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆಯಾಗಿದೆ ;

ಇ) ಈ ಯೋಜನೆ ಯಾವ ಹಂತದಲ್ಲಿದೆ? (ಗ್ರಾಮವಾರು ವಿವರ ಒದಗಿಸುವುದು)

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ಕುಗ್ರಾಮ–ಸುವರ್ಣಗ್ರಾಮ ಯೋಜನೆಯಡಿ ಕೊಡಗು ಜಿಲ್ಲೆಯ ಮಡಿಕೇರಿ ಹಾಗೂ ವಿರಾಜಪೇಟೆ ತಾಲ್ಲೂಕುಗಳಲ್ಲಿ ತಲಾ ಒಂದು ಗ್ರಾಮ ಮತ್ತು ಸೋಮವಾರಪೇಟೆ ತಾಲ್ಲೂಕಿನಲ್ಲಿ 2ರಂತೆ ಒಟ್ಟು 4 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಆ) ಆಯ್ಕೆಯಾದ ಪ್ರತಿ ಗ್ರಾಮಕ್ಕೆ ರೂ. 20 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಹಣದ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಇ) ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಎಲ್.ಎ.ಪ್ರಶ್ನೆ ಸಂಖ್ಯೆ 1402ರ ಅನುಬಂಧ

ಕುಗ್ರಾಮ ಸುವರ್ಣ ಗ್ರಾಮ ಯೋಜನೆಯಡಿ ಕೊಡಗು ಜಿಲ್ಲೆಯಲ್ಲಿ ಆಯ್ಕೆಯಾದ ಗ್ರಾಮಗಳಿಗೆ ವಿಗಡಿಸಿದ, ಬಿಡುಗಡೆಯಾದ ಅನುದಾನ ಹಾಗೂ ಪ್ರಗತಿಯ ವಿವರಗಳು

ರೂ.ಲಕ್ಷಗಳಲ್ಲಿ

ಕ್ರ. ಸಂ.	ತಾಲ್ಲೂಕು	ಆಯ್ಕೆಯಾದ ಗ್ರಾಮ	ಗ್ರಾಮ ಪಂಚಾಯ್ತಿ	ವಿಗಡಿಸಿದ ಅನುದಾನ	ಯೋಜನಾ ಅರಂಭದಿಂದ ಜೂನ್ 07ರ ವರೆಗೆ ಬಿಡುಗಡೆಯಾದ ಅನುದಾನ	ಯೋಜನಾ ಅರಂಭದಿಂದ ಜೂನ್ 07ರ ವರೆಗಿನ ಸಂಚಿತ ವೆಚ್ಚ	ಯೋಜನಾ ಹಂತ
1	2	3	4	5	6	7	8
1	ಮಡಿಕೇರಿ	ಮೊಣ್ಣಂಗೇರಿ	ಗಾಳಿಬೀಡು	20.00	20.00	20.00	ಕಾಮಗಾರಿ ಪೂರ್ಣಗೊಂಡಿದೆ
2	ಸೋಮವಾರಪೇಟೆ	ಊರುಗುತ್ತಿ	ಬ್ಯಾಡಗೊಟ್ಟ	20.00	20.00	20.00	ಕಾಮಗಾರಿ ಪೂರ್ಣಗೊಂಡಿದೆ
3	ಸೋಮವಾರಪೇಟೆ	ಜನಾರ್ಧನಹಳ್ಳಿ	ಬೆಸ್ಸೂರು	20.00	10.00	9.30	ಲಭ್ಯವಿರುವ ಅನುದಾನದಲ್ಲಿ ಕಾಮಗಾರಿಗಳನ್ನು ಅನುಷ್ಠಾನಿಸಲಾಗುತ್ತಿದೆ. ಕಾಮಗಾರಿಗಳು ಪ್ರಗತಿ ಹಂತದಲ್ಲಿರುತ್ತದೆ
4	ವಿರಾಜಪೇಟೆ	ಬಿಳುಗುಂದ	ಬಿಳುಗುಂದ	20.00	20.00	19.30	15 ಕಾಮಗಾರಿಗಳು ಪೂರ್ಣಗೊಂಡಿದ್ದು, 2 ಕಾಮಗಾರಿಗಳು ಬಾಕಿ ಇರುತ್ತವೆ.
			ಒಟ್ಟು	80.00	70.00	68.60	